ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ | 2 |
| ಮೊದಲನೆಯ ಪದ್ಯ | 2 |
| ಶ್ರೀಯರಸ | 4 |
| ಗಾಂಗೇಯನುತ | 7 |
| ಕೌಂತೇಯವಂದಿತಚರಣ | 9 |
| ಕಮಲದಳಾಯತಾಂಬಕ | 9 |
| ರೂಪಚಿನ್ಮಯ | 10 |
| ದೇವಕೀತನಯ | 13 |

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ
## ಮೊದಲನೆಯ ಪದ್ಯ

**ಶ್ರೀ ಕನಕದಾಸವಿರಚಿತ ಶ್ರೀಹರಿಭಕ್ತಿಸಾರ**
ಶ್ರೀ ವಿಷ್ಣುದಾಸನಾಗೇಂದ್ರಾಚಾರ್ಯವಿರಚಿತ
ಸಾರಾಮೃತ ವ್ಯಾಖ್ಯಾನದೊಂದಿಗೆ

**ಪಾದಕೆರಗುವ ಭಕ್ತಜನರ**
**ಬಾಧೆಗಳ ಕಳೆಯುತ್ತ ನಿತ್ಯದಿ**
**ಮೋದ ನೀಡುವ ಗುರುಗಳಂತರ್ಯಾಮಿಗೊಂದಿಸುತ ।**
**ಆದಿಕೇಶವದಾಸರೊರಿದಿಹ**
**ಮಾಧವಪ್ರಿಯವಾದ ಕೃತಿಯನು**
**ಆದರದಿ ವಿವರಿಸುವೆ ಶ್ರೀಹರಿಭಕ್ತಿಸಾರವನು ॥**

ನಿರಂತರ ಭಗವತ್ಸ್ಮರಣಶೀಲರಾದ ದಾಸವರ್ಯ ಶ್ರೀಕನಕದಾಸರು ಭವಬಂಧಮೋಚಕವಾದ ಭಗವನ್ನಾಮಸ್ಮರಣೆ, ಗುಣಮಾಹಾತ್ಮ್ಯಚಿಂತನ ಮತ್ತು ಸರ್ವಾತ್ಮನಾ ಶರಣಾಗತಿ ಎಂಬ ಮೂರು

ಸಾಧನಗಳನ್ನು ಕಲಿಕಾಲದಿಂದ ಕಲುಷಿತರಾದ ಜನರಿಗೆ ಮೋಕ್ಷಮಾರ್ಗವನ್ನಾಗಿ ತಿಳಿಸಲೋಸುಗ ಶ್ರೀಹರಿಭಕ್ತಿಸಾರ ಎಂಬ ಶ್ರೇಷ್ಠಕೃತಿಯನ್ನು ರಚನೆ ಮಾಡಲು ಉದ್ಯುಕ್ತರಾಗಿ ಈ ಹರಿಭಕ್ತಿಸಾರಗ್ರಂಥವು ನಿರ್ವಿಘ್ನವಾಗಿ ಪರಿಸಮಾಪ್ತಿಯಾಗಲು ಮತ್ತು ಭವಬಂಧನದಲ್ಲಿ ಸಿಲುಕಿದ ಸಜ್ಜನರಿಗೆ ದೊರೆಯುವಂತಾಗಲಿ ಎಂದು ಪರಮಾತ್ಮನನ್ನು ಪ್ರಾರ್ಥಿಸುತ್ತಾ ಪರಮಮಂಗಳವಾದ ಅವನ ನಾಮಸ್ಮರಣೆಯೊಂದಿಗೆ ಗ್ರಂಥವನ್ನು ಆರಂಭಿಸುತ್ತಿದ್ದಾರೆ —

**ಶ್ರೀಯರಸ ಗಾಂಗೇಯನುತ ಕೌಂ-**
**ತೇಯವಂದಿತಚರಣ ಕಮಲದ-**
**ಳಾಯತಾಂಬಕ ರೂಪಚಿನ್ಮಯ ದೇವಕೀತನಯ ।**
**ರಾಯ ರಘುಕುಲವರ್ಯ ಭೂಸುರ-**
**ಪ್ರೀಯ ವರಪುರನಿಲಯ ಚೆನ್ನಿಗ-**
**ರಾಯ ಚತುರೋಪಾಯ ರಕ್ಷಿಸು ನಮ್ಮನನವರತ ‖ ೧ ‖**

# ಶ್ರೀಯರಸ

ಶ್ರೀಯ ಅರಸ ಶ್ರೀಯರಸ. ಶ್ರೀಯ ಲಕ್ಷ್ಮೀದೇವಿಯ ಅರಸ ಒಡೆಯ. ಬ್ರಹ್ಮರುದ್ರರಿಂದಾರಂಭಿಸಿ ಇಡಿಯ ಪ್ರಪಂಚಕ್ಕೆ ಸೌಭಾಗ್ಯವನ್ನು ಕರುಣಿಸುವ ಭಾಗ್ಯದೇವತೆಯನ್ನು ಪಾಲಿಸುವ ಮಹಾಮಹಿಮ.

ಮಾಧ್ವಸಾಹಿತ್ಯದಲ್ಲಿ ಲಕ್ಷ್ಮೀದೇವಿಯನ್ನು ಪ್ರತ್ಯೇಕವಾಗಿ ಸ್ತುತಿಸುವ ಪರಿಪಾಠವಿಲ್ಲ[1]. ಕಾರಣ, ಲಕ್ಷ್ಮೀದೇವಿ ಪರಮಾತ್ಮನಿಂದ ಎಂದಿಗೂ ಎಂದೆಂದಿಗೂ ಬೇರೆಯಾಗುವದಿಲ್ಲ. ಸರ್ವಪ್ರದೇಶಗಳಲ್ಲಿಯೂ ಸರ್ವಕಾಲಗಳಲ್ಲಿಯೂ ಜತೆ ಜತೆಯಾಗಿಯೇ ಇರುವ ಆದಿದಂಪತಿಗಳು ಈ ಲಕ್ಷ್ಮೀನಾರಾಯಣರು. 'ಅವರಿಬ್ಬರೂ ಬೇರೆಯಾದರು' ಎಂಬ ಸಣ್ಣ ಚಿಂತನೆಯೂ ಮಹಾ ಅನರ್ಥಕ್ಕೀಡು ಮಾಡಿಬಿಡುತ್ತದೆ. ರಾಮನ ಕಾಲದ ಅಗಸರು ಈ ಚಿಂತನೆಯಿಂದಾಗಿಯೇ ತಮಸ್ಸನ್ನು ಪಡೆದುಬಿಟ್ಟರು. ಸ್ವಯಂ ಶ್ರೀಮದಾಚಾರ್ಯರು

[1] ಶ್ರೀ ವಾದಿರಾಜರು, ಮಾದನೂರಿನ ಶ್ರೀ ವಿಷ್ಣುತೀರ್ಥರು ಮುಂತಾದವರು ಒಂದು ಪ್ರತ್ಯೇಕ ಶ್ಲೋಕ ಅಥವಾ ಸ್ತೋತ್ರ ಮಾಡಿ ಸ್ತುತಿಸಿದರೂ, ಶ್ರೀಹರಿಯ ಪತ್ನಿ, ಅವನಧೀನಳು ಎಂಬ ಚಿಂತನೆಯೊಂದಿಗೇ ಸ್ತುತಿಸುತ್ತಾರೆ. ಶ್ರೀಮದಾಚಾರ್ಯರು "ವಿಶ್ವಸ್ಥಿತಿ-" ಎಂಬ ಸ್ತೋತ್ರದಲ್ಲಿ ಮಾಡಿದಂತೆ.

ತಾವು ಲಕ್ಷ್ಮೀಗುಣವರ್ಣನೆಗಾಗಿಯೇ ಒಂದು ಸ್ತೋತ್ರವನ್ನು ರಚಿಸಿದ್ದರೂ ಅವಳ ಪ್ರತಿಗುಣದಲ್ಲಿ ಭಗವಂತನ ಚಿಂತನೆಯನ್ನು ಮಾಡಿದ್ದಾರೆ. ಅವಳ ಸ್ತುತಿಯನ್ನು ಮಾಡದೆ ಸಾಧಕನಿಗೆ ಜ್ಞಾನ ದೊರೆಯುವದಿಲ್ಲ. ಆದರೆ ಅವಳ ಸ್ತುತಿಯನ್ನು ಪ್ರತ್ಯೇಕವಾಗಿ ಮಾಡಿದರೆ ಅವಳು ಜ್ಞಾನವನ್ನೇ ಕರುಣಿಸುವದಿಲ್ಲ. ಹೀಗಾಗಿ ನಾರಾಯಣನನ್ನು ಶ್ರೀಪತಿ ಎಂದು ಸ್ತುತಿಸುವದೇ ಲಕ್ಷ್ಮೀದೇವಿಯ ಸ್ತುತಿ. ಈ ಮಾತನ್ನು ಆಚಾರ್ಯರು ಗೀತಾತಾತ್ಪರ್ಯನಿರ್ಣಯದ ಹನ್ನೆರಡನೆಯ ಅಧ್ಯಾಯದಲ್ಲಿ ತಿಳಿಸಿದ್ದಾರೆ. ಆ ಆದೇಶವನ್ನು ಪಾಲಿಸುತ್ತಿರುವ ಕನಕದಾಸರು ಪರಮಾತ್ಮನನ್ನು ಶ್ರೀಯರಸ ಎಂದೇ ಸ್ತುತಿಸಿ ಲಕ್ಷ್ಮೀನಾರಾಯಣರಿಬ್ಬರ ಸ್ಮರಣೆಯನ್ನೂ ಮಾಡುತ್ತಿದ್ದಾರೆ.

ಶ್ರೀಯರಸ ಎಂಬ ಮಂಗಳಶಬ್ದದಿಂದ ತಮ್ಮ ಕೃತಿಯನ್ನು ಆರಂಭಿಸುತ್ತಿರುವ ಕನಕದಾಸರು ಈ ಕೃತಿಯನ್ನು ರಚಿಸುತ್ತಿರುವ ತಮಗೆ, ಅಧ್ಯಯನ ಮಾಡುವ ಜನರಿಗೆ ಜ್ಞಾನಾದಿ ಸಕಲ ಸದ್ಗುಣಗಳ

ಮತ್ತು ಮೋಕ್ಷಪ್ರದ ಸಂಪತ್ತಿನ ಅಭಿವೃದ್ಧಿಯಾಗಲಿ ಎಂದು ಹಾರೈಸುತ್ತಾರೆ, ಹರಸುತ್ತಾರೆ.

ದಾಸರಾಯರು ಈ ಕೃತಿಯಲ್ಲಿ ತಿಳಿಸಲಿರುವದು ಶ್ರೀಹರಿಯ ನಾಮಸ್ಮರಣೆ ಮತ್ತು ಶರಣಾಗತಿಗಳನ್ನು. ಆ ಎರಡೂ ವಿಷಯಗಳನ್ನು ಶ್ರೀಯರಸ ಎಂಬ ಶಬ್ದದಿಂದಲೇ ಸೂಚಿಸಿದ್ದಾರೆ.

ಶ್ರೀಯರಸ ಎನ್ನುವದು ನಾಮ. ಹೆಸರು. ಆ ನಾಮಸ್ಮರಣೆಯ ಮುಖಾಂತರ ನಾಮಸ್ಮರಣೆಯೇ ತಮ್ಮ ಕೃತಿಯ ವಿಷಯ ಎನ್ನುವದನ್ನು ತಿಳಿಸಿದರು.

ಶ್ರೀ ಎಂದರೆ ಆಶ್ರಯಿಸಿದವಳು ಎಂದರ್ಥ. ನಿತ್ಯಮುಕ್ತಳಾದ, ಎಂದಿಗೂ ದುಃಖವಿಲ್ಲದ ಮಹಾಲಕ್ಷ್ಮೀದೇವಿಯೂ ಪರಮಾತ್ಮನನ್ನು ಆಶ್ರಯಿಸಿದ್ದಾಳೆ. ಹರಿಯನ್ನು ಆಶ್ರಯಿಸಿರುವದರಿಂದಲೇ ಅವಳಿಗೆ ಶ್ರೀ ಎಂದು ಹೆಸರು.

ಆಶ್ರಯಿಸಿದವರಿಗೆ ಅರಸ ನಮ್ಮ ಸ್ವಾಮಿ ಎಂಬ ಅರ್ಥದ ಮುಖಾಂತರ ದೇವರಲ್ಲಿ ಭಕ್ತರ

ಶರಣಾಗತಿ ತಮ್ಮ ಕೃತಿಯ ವಿಷಯ ಎನ್ನುವದನ್ನು ನಿರೂಪಿಸಿದರು ದಾಸವರ್ಯರು.

## ಗಾಂಗೇಯನುತ

ಶರಶಯ್ಯೆಯಲ್ಲಿ ಮಲಗಿ ಅಪಾರಯಾತನೆಯನ್ನು ಅನುಭವಿಸುತ್ತಿದ್ದರೂ ಎದುರಿಗೆ ಬಂದು ನಿಂತ ಭಗವಂತನ ಮೂರು ರೂಪಗಳನ್ನು (ವ್ಯಾಸ-ಪರಶುರಾಮ-ಶ್ರೀಕೃಷ್ಣ) ಅನನ್ಯವಾಗಿ ಸ್ತುತಿಸಿ ಅವನ ಮಾಹಾತ್ಮ್ಯವನ್ನು ಅತ್ಯುತ್ಸಾಹದಿಂದ ಯುಷ್ಠಿರನ ಮುಂದೆ ನಿರೂಪಿಸಿದ ಭಾಗವತೋತ್ತಮರಾದ ಗಂಗಾಪುತ್ರ ಭೀಷ್ಮಾಚಾರ್ಯರ ನುಡಿಗಳಿಂದ ನುತನಾದವನು.

ಆರಂಭದಲ್ಲಿಯೇ ಈ ಗಾಂಗೇಯನುತ ಎಂಬ ಶಬ್ದವನ್ನು ಬಳಸಲು ಮಹತ್ತ್ವದ ಕಾರಣವಿದೆ.

ಭೀಷ್ಮಾಚಾರ್ಯರು ಶ್ರೇಷ್ಠ ಬ್ರಹ್ಮಚರ್ಯವನ್ನು ಪಾಲಿಸಿದ ಮಹಾನುಭಾವರು. ಆದರೆ ಆ ಬ್ರಹ್ಮಚರ್ಯವನ್ನು ಪಾಲಿಸುವ ಭರದಲ್ಲಿ ಪರಶುರಾಮದೇವರ ವಿರೋಧವನ್ನೂ ಮಾಡಿದರು. ಸಭೆಯಲ್ಲಿ ದ್ರೌಪದಿಗೆ ಅವಮಾನವಾಗಬೇಕಾದರೂ

ಸುಮ್ಮನಿದ್ದರು. ಶ್ರೀಕೃಷ್ಣನ ವಿರುದ್ಧ ಪಕ್ಷದಲ್ಲಿದ್ದು ಯುದ್ಧವನ್ನು ಮಾಡಿದರು.

ಆದರೆ, ತಮ್ಮ ತಪ್ಪಿನ ಅರಿವಾಗಿ ಪರಮಾತ್ಮನಿಗೆ ಶರಣುಹೋದಾಗ ಪರಮಾತ್ಮ ಅವರನ್ನು ಮನ್ನಿಸಿದ. ತನ್ನವರನ್ನಾಗಿ ಸ್ವೀಕರಿಸಿದ. ಅವರ ಅಂತ್ಯಕಾಲದಲ್ಲಿ ಕೃಷ್ಣ-ವ್ಯಾಸ-ಪರಶುರಾಮ ಎಂಬ ಮೂರು ರೂಪಗಳಿಂದ ಅವರ ಮುಂದಿದ್ದು ಅವರ ಸ್ತೋತ್ರವನ್ನಾಲಿಸಿದ.

ನಾವು ಜೀವರೂ ಹಾಗೆಯೇ. ಸ್ವಭಾವದಲ್ಲಿ ಶುದ್ಧರಿದ್ದರೂ ಸಂಸಾರದಲ್ಲಿ ದೇವರ, ದೇವತೆಗಳ, ಗುರುಗಳ ವಿರೋಧವನ್ನು ಮಾಡುತ್ತೇವೆ. ಆದರೆ ನಮ್ಮ ತಪ್ಪಿನ ಅರಿವಾಗಿ ಅವನ ಪಾದಕ್ಕೆ ಎರಗಿದಾಗೆ ನಮ್ಮ ಮನಸ್ಸಿನ ಪಶ್ಚಾತ್ತಾಪ, ನಾವು ಮಾಡಿಕೊಂಡ ಪ್ರಾಯಶ್ಚಿತ್ತಗಳನ್ನು ಗಮನಿಸುವ ಶ್ರೀಹರಿ ತನ್ನವರನ್ನಾಗಿ ನಮ್ಮನ್ನು ಸ್ವೀಕರಿಸುತ್ತಾನೆ. ಹೀಗೆ ಪರಮಾತ್ಮ ಭಕ್ತರಪರಾಧಗಳನ್ನು ಮನ್ನಿಸುವ ಕರುಣಾಳು ಎನ್ನುವದನ್ನು ಈ ಗಾಂಗೇಯನುತ ಎಂಬ ಶಬ್ದದಿಂದ ಸೂಚಿಸಿದರು.

## ಕೌಂತೇಯವಂದಿತಚರಣ

ಕುಂತಿಯ ಮಕ್ಕಳಾದ ಪಾಂಡವರಿಂದ ನಮಸ್ಕರಿಸಲ್ಪಟ್ಟ ಚರಣವುಳ್ಳವನು. ಹುಟ್ಟಿನಿಂದ ಅವಮಾನ, ಯಾತನೆಗಳಿಗೆ ಒಳಗಾದರೂ ಅವುಗಳಿಂದ ವಿಚಲಿತರಾಗದೆ ಸ್ವಬಾಹುಬಲದಿಂದ ರಾಜ್ಯವನ್ನು ಸಂಪಾದಿಸಿ, ಯಾರಿಗೂ ಮಾಡಲಾಗದ ರಾಜಸೂಯಯಾಗವನ್ನು ಮಾಡಿ, ಮತ್ತೆ ವಂಚನೆಗೊಳಗಾಗಿ ಎಲ್ಲವನ್ನು ಕಳೆದುಕೊಂಡರೂ, ಭಯಂಕರವಾಗಿ ರಣದಲ್ಲಿ ಕಾದಾಡಿ ಜಗದೇಕವೀರರನ್ನು ಮಣ್ಣಾಗಿಸಿ ಭೂಮಿಯ ಆಧಿಪತ್ಯವನ್ನು ಪಡೆದ ಮಹಾಶಕ್ತಿಶಾಲಿಗಳಾದ ಪಾಂಡವರಿಂದ ಭಕ್ತಿಪೂರ್ಣವಾಗಿ ಸೇವಿಸಲ್ಪಟ್ಟವನು.

## ಕಮಲದಳಾಯತಾಂಬಕ

ಅಂಬಕ ಎಂದರೆ ಕಣ್ಣು. ಸಂಸ್ಕೃತದ ಶಬ್ದ. ಅಪರಿಚಿತ ಶಬ್ದವೇನಲ್ಲ. ಆದರೆ ಬಹಳ ಬಳಕೆಗೊಳಗಾಗದ ಶಬ್ದ. ತ್ರ್ಯಂಬಕ ಎಂದರೆ ಮೂರು ಕಣ್ಣುಳ್ಳ ಮುಕ್ಕಣ್ಣ. ತಾವರೆಯ ಎಸಳಿನಂತೆ

ಆಯತವಾದ ಅರ್ಥಾತ್ ವಿಶಾಲವಾದ ಕಣ್ಣುಳ್ಳವನು ಎಂದರ್ಥ. ಪುಂಡರೀಕಾಕ್ಷ.

ಒಡೆಯ ! ಭೀಷ್ಮನ ನುಡಿಗಳನ್ನು ಎದುರಿಗೆ ಒಂದಲ್ಲ ಮೂರು ರೂಪಗಳಲ್ಲಿ ನಿಂತು ಆಲಿಸಿದೆ. ಪಾಂಡವರ ಮನೆಯಲ್ಲಿಯೇ ವರ್ಷಗಟ್ಟಲೇ ವಾಸವಿದ್ದು ಅವರ ಸೇವೆಯನ್ನು ಸ್ವೀಕರಿಸಿದೆ. ಅವರಷ್ಟು ಹಿರಿಯ ಭಕ್ತ ನಾನಲ್ಲದಿದ್ದರೂ ನನ್ನ ಈ ನುಡಿಗಳನ್ನು ಪ್ರೇಮದಿಂದ ಆಲಿಸು. ಕಾರಣ ನಿನ್ನದು ಸಂಕುಚಿತ ದೃಷ್ಟಿಯಲ್ಲ. ನೀನು ಕಮಲದಳಾಯತಾಂಬಕ. ಪುಂಡರೀಕಾಕ್ಷ. ವಿಶಾಲವಾದ ಕಣ್ಣುಳ್ಳವ. ವಿಶಾಲವಾದ ದೃಷ್ಟಿಯುಳ್ಳವ. ನನ್ನನ್ನೂ ನಿನ್ನ ಭಕ್ತರಲ್ಲಿ ಸೇರಿಸು. ನನ್ನ ನುಡಿಗಳನ್ನೂ ಪ್ರೇಮದಿಂದ ಆಲಿಸು. ಆ ಕಮಲದ ಕಣ್ಗಳಿಂದಲೇ ನನ್ನನ್ನು ಪ್ರೀತಿಯಿಂದ ಹರಸು.

## ರೂಪಚಿನ್ಮಯ

ಚಿತ್ ಎಂದರೆ ಜ್ಞಾನ. ಚಿನ್ಮಯ ಎಂದರೆ ಜ್ಞಾನಾತ್ಮಕ. ಜ್ಞಾನವೇ ಮೊದಲಾದ ಅನಂತ ಮಂಗಳಗುಣಗಳನ್ನೇ ರೂಪವನ್ನಾಗಿ ಅರ್ಥಾತ್

ದೇಹವನ್ನಾಗಿ ಉಳ್ಳವನು ಚಿನ್ಮಯರೂಪ. ಚಿನ್ಮಯರೂಪನೇ ರೂಪಚಿನ್ಮಯ. (ಸಂಸ್ಕೃತದಲ್ಲಿ ಈ ರೀತಿಯ ಪ್ರಯೋಗ ತುಂಬ ಸಹಜ.)

ಕನಕದಾಸರು ಹರಿಭಕ್ತಿಸಾರದಲ್ಲಿ ಈ ದೇಹದ ನಶ್ವರತೆಯನ್ನು, ಅಸಾರತೆಯನ್ನು ಬಹಳವಾಗಿ ಹೇಳಿದ್ದಾರೆ. ಈ ಸಾಂಸಾರಿಕವಾದ ದೇಹದ ಕುರಿತು ಅವರಿಗೆ ತಿರಸ್ಕಾರವಿದೆ. ಹೊಲೆಪದಾರ್ಥಗಳಿಂದ ನಿರ್ಮಾಣವಾಗುವ ಈ ದೇಹವನ್ನು ಮರಳಿ ಮರಳಿ ಹೊಂದಬಾರದು ಎಂಬ ನಿಶ್ಚಯವಿದೆ. ಆದರೆ ನಾನು ಸ್ತೋತ್ರ ಮಾಡುತ್ತಿರುವ ಭಗವಂತನಿಗೆ ಇಂಥ ಹೊಲಸು ದೇಹವಿಲ್ಲ. ಅವನದು ಅಪ್ರಾಕೃತ ಚಿನ್ಮಯ ಶರೀರ ಎಂದು ಮೊಟ್ಟ ಮೊದಲಿಗೇ ಸ್ಮರಿಸುತ್ತಾರೆ. ನಾವು ಭಗವಂತನನ್ನು ಹೇಗೆ ಉಪಾಸಿಸುತ್ತೇವೆಯೋ ಅದೇ ತರಹದ ಫಲವನ್ನು ಪಡೆಯುತ್ತೇವೆ ಎಂಬ ಗೀತೆಯ ಮಾತನ್ನು ನೆನಪಿಗೆ ತಂದುಕೊಂಡು ಭಗವಂತನ ಬಳಿಯಲ್ಲಿ ಶಾಶ್ವತವಾಗಿ ಬದುಕುವ ಬಯಕೆಯನ್ನು ಹೊಂದಿದ ದಾಸರು, ಅದಕ್ಕಾಗಿ ತಮ್ಮ ಅಪ್ರಾಕೃತ ಚಿನ್ಮಯಶರೀರದ ಆವಿರ್ಭಾವವನ್ನು ಬಯಸುವ ದಾಸರು

ಪರಮಾತ್ಮನನ್ನು ರೂಪಚಿನ್ಮಯ ಎಂದೇ ಕರೆಯುತ್ತಾರೆ. ಅಷ್ಟೇ ಅಲ್ಲ. ಪರಮಾತ್ಮನಿಗೂ ಪರಮಾತ್ಮನ ರೂಪಕ್ಕೂ ವ್ಯತ್ಯಾಸವಿಲ್ಲ. ಪರಮಾತ್ಮನಿಗೂ ಪರಮಾತ್ಮನ ರೂಪ, ಗುಣ, ಕ್ರಿಯಾದಿಗಳಿಗೂ ಅಭೇದವಿದೆ ಎಂಬ ತತ್ವವನ್ನು ಚಿನ್ಮಯರೂಪ ಎಂದು ಹೇಳದೇ ರೂಪಚಿನ್ಮಯ ಎಂದು ಹೇಳುವದರ ಮುಖಾಂತರ ಅನುಸಂಧಾನ ಮಾಡುತ್ತಿದ್ದಾರೆ. (ರೂಪೇಣ ಚಿನ್ಮಯಃ)

ನಾನು ಸ್ತೋತ್ರಮಾಡುವವನು. ನೀನು ಸ್ತೋತ್ರ ಮಾಡಿಸಿಕೊಳ್ಳುವವನು. ನೀನು ಒಡೆಯ. ನಾನು ದಾಸ. ಯಾವ ದೇವತೆ ಮನುಷ್ಯರಿಗೂ ಇಲ್ಲದ ಚಿನ್ಮಯವಾದ ಶರೀರ ನಿನಗಿದೆ. ಹೀಗೆ ತಾನು ಬೇರೆ ಪರಮಾತ್ಮ ಬೇರೆ, ತನಗೂ ಪರಮಾತ್ಮನಿಗೂ ಎಣೆಯಿರದಷ್ಟು ವ್ಯತ್ಯಾಸವುಂಟು ಎನ್ನುವ ಭೇದಸಿದ್ಧಾಂತವನ್ನು, ಯಾವ ಚಿಂತನೆಯನ್ನು ಸದಾಕಾಲದಲ್ಲಿಯೂ ಅತ್ಯವಶ್ಯವಾಗಿ ಮಾಡಬೇಕೆಂದು ಶ್ರೀಮದಾಚಾರ್ಯರು ತಿಳಿಸಿದ್ದಾರೆಯೋ ಅಂತಹ ಭೇದಚಿಂತನೆಯನ್ನು ದಾಸರು ಆರಂಭದಲ್ಲಿಯೇ ಮಾಡುತ್ತಿದ್ದಾರೆ.

## ದೇವಕೀತನಯ

ಭಗವಂತ ಇಂಥ ಅಪ್ರಾಕೃತಶರೀರದವನಾದರೂ, ಅವ್ಯಕ್ತಸ್ವಭಾವನಾದರೂ, ಮನುಷ್ಯರ ಕಣ್ಣಿಗೆ ದೇವಕಿ, ಕೌಸಲ್ಯಾ, ರೇಣುಕಾ, ಅದಿತಿಯರ ಮಗನಾಗಿ ಮನುಷ್ಯರ ಹಾಗೆಯೇ ತೋರುತ್ತಾನೆ. ಆದರೆ ಅವನಿಗೆ ಮಾನುಷ ಶರೀರವಿಲ್ಲ. ಪಂಚಭೂತಗಳ ಬಂಧನವಿಲ್ಲ. ದೇವಕೀತನಯನಾದರೂ ರೂಪಚಿನ್ಮಯ. ರೂಪಚಿನ್ಮಯನೇ ದೇವಕೀತನಯ. ಅರ್ಥಾತ್ ಅವತಾರರೂಪಗಳಲ್ಲಿಯೂ ಅವನು ಜ್ಞಾನ-ಆನಂದಮಯವಾದ ಅಪ್ರಾಕೃತ ಶರೀರವುಳ್ಳವನೇ. ವೀರ್ಯ-ರಕ್ತ-ಮಾಂಸ-ಎಲುವುಗಳಿಂದ ನಿರ್ಮಿತವಾದ ಶರೀರವುಳ್ಳವನಲ್ಲ.

ಈ ತತ್ವವನ್ನು ಹೇಳಲಿಕ್ಕಾಗಿಯೇ ದಾಸರು ರೂಪಚಿನ್ಮಯ ಎಂಬ ಶಬ್ದ ಬಳಸಿದ ತಕ್ಷಣ ಕೌಸಲ್ಯಾನಂದನ, ರೇಣುಕಾತ್ಮಜ, ಅದಿತಿತನುಜ ಮುಂತಾದವನ್ನು ಬಳಸದೆ ದೇವಕೀತನಯ ಎಂಬ ಶಬ್ದವನ್ನು ಬಳಸಿ ಶ್ರೀಕೃಷ್ಣರೂಪದ ಚಿಂತನೆಯನ್ನು

ಮಾಡಿದ್ದಾರೆ. ಕಾರಣ, ಭಗವಂತ ದೇವಕಿಯ ಮಗನಾಗಿ ಅವತರಿಸುವ ಸಂದರ್ಭದಲ್ಲಿ ಮಗುವಾಗಿ ಅವತರಿಸಲಿಲ್ಲ. ದೇವಕಿಗೆ ಹೆರಿಗೆಯಾಯಿತು, ಅವಳ ಹೊಟ್ಟೆಯಿಂದ ಮಗು ಹೊರಬಂದಾಗಿದೆ, ಆದರೆ ಮಗು ಅಲ್ಲಿಲ್ಲ. ಶಂಖಚಕ್ರಗದಾಪದ್ಮಧಾರಿಯಾದ ಪೀತಾಂಬರವನ್ನುಟ್ಟ ಸಮಸ್ತಾಭರಣಭೂಷಿತನಾದ ಶ್ರೀಹರಿ ಅಲ್ಲಿದ್ದ. “ಸಶಂಖಚಕ್ರಾಬ್ಜಗದಃ ಸ ದೃಷ್ಟಃ” ವಸುದೇವನಿಂದ ದೇವಕಿಯಿಂದ ಸ್ತುತನಾದ ಬಳಿಕ, ಮುಂದೆ ಮಾಡಬೇಕಾದ ಕಾರ್ಯವನ್ನು ವಸುದೇವನಿಗೆ ಉಪದೇಶಿಸಿ, ದೇವಕಿಗೆ ಅಭಯವನ್ನಿತ್ತ ನಂತರ ಭಗವಂತ ಕಡುಗಪ್ಪುಬಣ್ಣದ ಮಗುವಾಗಿ ದೇವಕೀ ವಸುದೇವರಿಗೆ ತೋರುತ್ತಾನೆ. ಹೀಗಾಗಿ ಪರಮಾತ್ಮನ ದೇಹ ಶುಕ್ಲಶೋಣಿತದಿಂದ ನಿರ್ಮಿತವಾದದ್ದಲ್ಲ, ನಿರ್ಮಿತವಾಗಿದ್ದರೆ ಅವನು ಮಗುವಾಗಿಯೇ ತೋರಬೇಕಾಗಿತ್ತು, ಶಂಖಚಕ್ರಗಳೆಲ್ಲ ಎಲ್ಲಿಂದ ಬರಲು ಸಾಧ್ಯ? ಆದ್ದರಿಂದ ಶ್ರೀಕೃಷ್ಣನ, ಯಾವುದೇ ಅವತಾರದ ರೂಪ ಅಪ್ರಾಕೃತವೇ, ಚಿನ್ಮಯವೇ ಹೊರತು ಪಾಂಚಭೌತಿಕವಾದದ್ದಲ್ಲ ಎಂದು ಸಿದ್ಧವಾಯಿತು.

ಹೀಗಾಗಿ ಪರಮಾತ್ಮ ದೇವಕೀತನಯನಾಗಿ ಅವತರಿಸಿದಾಗ ತನ್ನೆಲ್ಲ ಅವತಾರರೂಪಗಳೂ ಮೂಲರೂಪದಂತೆಯೇ ಚಿನ್ಮಯ ಅಪ್ರಾಕೃತವಾದದ್ದು ಎಂದು ಸಾರಿದ್ದಾನೆ. ದಾಸರು ಈ ತತ್ವವನ್ನು ಅನುಸಂಧಾನ ಮಾಡಲಿಕ್ಕಾಗಿಯೇ ರೂಪಚಿನ್ಮಯ ಎಂದು ಭಗವಂತನನ್ನು ಸ್ತುತಿಸಿದ ತಕ್ಷಣ ದೇವಕೀತನಯ ಎಂದು ಸ್ತುತಿಸಿದ್ದಾರೆ. ಭಗವಂತನ ಮೂಲರೂಪವಷ್ಟೇ ಅಲ್ಲ ಸಕಲ ರೂಪಗಳೂ ಚಿನ್ಮಯ ಅಪ್ರಾಕೃತಗಳೇ ಎಂದು.

(… ಮುಂದುವರೆಯುತ್ತದೆ)

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491